

# ಮಕ್ಕಳ ಮೇಲೆ ಬರುವ ಕೇಡುಗಳು



## ನುಡಿಯಲ್ಪಟ್ಟ ಪ್ರವಾದನೆ

ಉಪವಾಸ ಕೂಟದಲ್ಲಿ ದೇವಜನರೊಂದಿಗೆ ನಾನು ದೇವರ ಸಮ್ಮುಖದಲ್ಲಿ ಆತನ ಮಾತಿಗಾಗಿ ಕಾಯುತ್ತಿರುವಾಗ ದೇವರು ನಮ್ಮೊಂದಿಗೆ ಮಾತನಾಡಿ: ಮತ್ತೂ ನಿನ್ನ ದೇಶವನ್ನು ಹಿಡಿದಿರುವಂತ ಕ್ರೂರವಾದ ದುಷ್ಟ ಆತ್ಮಗಳು ಅನೇಕ ವಿಧವಾದ ಕ್ರೀಯೆಗಳ ಮೂಲಕ, ಚಿಕ್ಕ ಮಕ್ಕಳ ನಡುವೆ ಕ್ರಾರ್ಯಮಾಡಲು ತಂತ್ರವನ್ನಿಟ್ಟುಕೊಂಡಿವೆ. ಈಗ ಈ ದುಷ್ಟಆತ್ಮಗಳು ಇಳಿದು ಬರುವದಕ್ಕೆ ಬೇಕಾದಂತ ಮಾರ್ಗಗಳು, ಬಾಗಿಲುಗಳು ತೆರೆಯಲ್ಪಡುತ್ತಲಿದೆ. ಮರೆಯಾಗಿರುವಂತ ಕೆಲವು ಪುರಾಣ ಕಥೆಗಳಲ್ಲಿಯೂ, ಇತಿಹಾಸಗಳಲ್ಲಿಯೂ ತಿಳಿಸಲ್ಪಟ್ಟಿರುವಂತ ಕೆಲವು ಸಂಗತಿಗಳನ್ನಿಟ್ಟುಕೊಂಡು, ಅದನ್ನು ಮಕ್ಕಳನಡುವೆ ನುಸುಳಿಸಿ, ಇದು ದೇಹಕ್ಕೆ ಒಳ್ಳೆದೆಂದೂ, ಶರೀರಕ್ಕೆ ಆರೋಗ್ಯವೆಂದೂ ಪಾಠ ಮಾಡುವರು. ಇದನ್ನು ಅಭ್ಯಾಸಮಾಡುವವರ ಶರೀರವು ದುಷ್ಟಆತ್ಮಗಳನ್ನೂ, ಅನ್ಯ ಅಭಿಷೇಕವನ್ನು ತನ್ನೊಳಗೆ ಸೆಳಕ್ಕೊಳ್ಳುವಂತಹ ಶಕ್ತಿಹೊಂದುತ್ತದೆ. ಇದಕ್ಕೆ ಅಭ್ಯಾಸವನ್ನು ಕೊಡಲು ನಿನ್ನ ದೇಶದಲ್ಲಿ ಅನೇಕ ಪ್ರಯತ್ನವು ಬಹು ತೀವ್ರವಾಗಿ ನಡೆಯಲ್ಪಡುತ್ತಾ ಇದೆ. ಇದರ ಹಿಂದೆ ಬಹು ಮುಖ್ಯವಾದ ಮೂರು ವ್ಯಕ್ತಿಗಳು ಅಡಗಿದ್ದಾರೆ, ಮರೆಯಾಗಿರುವಂತದ್ದೂ, ಸೈತಾನನ ತಂತ್ರಗಳು ಆಗಿರುವಂತ ಶಾಸ್ತ್ರಗಳನ್ನು ಕಲಿತು ತೆರ್ಗಡೆ ಹೊಂದಿರುವವ ಇವರು ಸರ್ಕಾರವನ್ನು ತಮ್ಮ ಕೈಯೊಳಗೆ ಅಡಗಿಸಿ, ದೇಶಕ್ಕೆ ವಿರೋಧವಾಗಿ ಮಕ್ಕಳನ್ನೂ, ಹೆಂಗಸರನ್ನೂ, ಯುವಕರನ್ನೂ, ಹಿರಿಯರನ್ನೂ ಇಗೋ, ಆರೋಗ್ಯವನ್ನುಂಟು ಮಾಡುತ್ತೇವೆಂದು ಹೇಳಿ, ಅನೇಕರನ್ನು ಸಿದ್ಧಗೊಳಿಸಿಸುತ್ತಾರೆ. ಈ ದುಷ್ಟಕೇಡು ನಿನ್ನ ದೇಶದ ಮೇಲೆ ಬರುತ್ತಿದೆ. ಅದು ಹದ್ದಿನಂತೆ ನಿನ್ನ ದೇಶದ ಮೇಲೆ ಹಾರಿ ಬರುತ್ತಿದೆ. ಈಗ ಅದರ ವೇಗವು ಕುಂಟಿತಗೊಂಡಂತೆ ಕಂಡುಬಂದರು, ಅದು ಮತ್ತೆ ಮತ್ತೊಂದು ವೇಗದಿಂದ ಹೊರಡುತ್ತದೆ. ಅದು ಹೊರಡುವದಕ್ಕೂ ಮುಂಚೆ ಅದರ ರೆಕ್ಕೆಗಳು ಕಡಿಯಲ್ಪಡಬೇಕು, ಅದನ್ನು ಜಾರಿಗೆ ತರುವವರೂ, ಅದರ ಅಧಿಕಾರಸ್ತರು ಅದರೊಂದಿಗೆ ಕಟ್ಟಲ್ಪಡಬೇಕು. ಇದು ಪ್ರಾರ್ಥಿಸುವವನ ಪ್ರಾರ್ಥನೆಯಿಂದಲೂ, ಮೊರೆಯಿಟ್ಟು ಗೋಳಾಡುವವನ ಕಣ್ಣೀರಿನಿಂದಲೇ ಸ್ತಗಿತಗೊಳ್ಳುತ್ತದೆ. ಮಕ್ಕಳ ಮೇಲೆ ನುಡಿಯಲ್ಪಟ್ಟಿರುವ ವಾಗ್ದಾನಗಳು ಅವರ ಮೇಲೆ ನೆರವೇರುವದಕ್ಕೂ ಮುಂಚೆ ಅವರನ್ನು ದಿಕ್ಕು ಬದಲಿಸಲು ಸೈತಾನನು ಇಟ್ಟುಕೊಂಡಿರುವ ತಂತ್ರವೇ ಅಲ್ಲದೆ ಇದು ಬೇರೇನು ಇಲ್ಲ. ಸೈತಾನನ ಶಕ್ತಿ ಜನರ ಮೇಲೆ ಬರಲು ಇವರನ್ನು ತಮಗೆ ಬಾಗಿಲನ್ನಾಗಿಟ್ಟುಕೊಳ್ಳುವದೆ ಅವನ ತಂತ್ರೋಪಾಯ ಎಂದು ಕರ್ತನು ನುಡಿಯುತ್ತಾನೆ. (ಪ್ರಕಟಿಸಲ್ಪಟ್ಟ ದಿನ 10–9–2016 ರಾಮನಾಥಪುರಂ)

## ಪ್ರಾರ್ಥನ ಮನವಿ

01. ಚಿಕ್ಕ ಮಕ್ಕಳಿಗೆ ವಿರುದ್ಧವಾಗಿ ದೇಹದಾರ್ಢ್ಯತೆ ಎಂಬ ವಿಧಾನದಲ್ಲಿ ಸೈತಾನನ ಕ್ರಿಯೆಗಳನ್ನೂ, ಮಂತ್ರಗಳನ್ನೂ ನ್ಯಾಯವಾದಂತೆ ತಂದು, ಅವರ ಮನಸ್ಸನ್ನು ಕೆಡಿಸಲು ನೆನೆಸಿರುವಂತ ದುಷ್ಟ ಆತ್ಮಗಳು ಕಟ್ಟಲ್ಪಡಬೇಕು.

02. ಚಿಕ್ಕ ಮಕ್ಕಳ ಪರಿಶುದ್ಧತೆಗಾಗಿ ಪ್ರಾರ್ಥಿಸಿ, ಪರಿಶುದ್ಧವಿಲ್ಲದ ಕ್ರಿಯೆಗಳಿಂದಲೇ ಸೈತಾನನು ನುಸುಳಲು ಸಾಧ್ಯ, ಮಕ್ಕಳ ಶರೀರಕ್ಕೆ ಅಶುದ್ಧ ಆತ್ಮಗಳ ಕಾರ್ಯಗಳಲ್ಲಿ ಯಾವದೊಂದು ತಾಕದಂತೆ ಪರಿಶುದ್ಧತೆಯೂ, ಕರ್ತನ ರಕ್ಷಣೆಯೂ ಅವರಿಗೆ ಉಂಟಾಗುವಂತೆ ಪ್ರಾರ್ಥಿಸಿರಿ.

03. ಕೆಲವು ಪುರಾಣಗಳು, ಮತ್ತು ಇತಿಹಾಸಗಳಲ್ಲಿ ಮರೆಯಾಗಿರುವ ಸೈತಾನನ ಕಾರ್ಯಗಳನ್ನು ಮಕ್ಕಳ ಮನಸ್ಸಿನಲ್ಲಿ ಹಚ್ಚಿ, ಅವರನ್ನು ಗೊಂದಲಪಡಿಸುವಂತ ಕಾರ್ಯದಿಂದ ಅವರು ಸಂರಕ್ಷಿಸಲ್ಪಡುವಂತೆ ಪ್ರಾರ್ಥಿಸಿರಿ

04. ದೇಶದಲ್ಲಿರುವಂತ ಚಿಕ್ಕಮಕ್ಕಳ ಮನಸ್ಸನ್ನು ಕೆಡಿಸಲು ಜಾರಿಗೆ ತರುವಂತ ಇಂತಹ ಕೆಟ್ಟದಾದ ಪ್ರಯತ್ನಗಳು ಎಲ್ಲವು ನಾಶವಾಗುವಂತೆಯೂ, ಇದಕ್ಕೆ ಹಿಂದೆ ಕಾರ್ಯಮಾಡುವಂತ ವ್ಯಕ್ತಿಗಳ ಯೋಜನೆಗಳು ಯಾವದೊಂದು ನಿಲ್ಲದೆ ನಾಶವಾಗುವಂತೆ ಪ್ರಾರ್ಥಿಸಿರಿ.

05. ದೇಶಕ್ಕೆ ವಿರುದ್ಧವಾಗಿ, ಮಕ್ಕಳನ್ನು, ಹೆಂಗಸರನ್ನೂ, ಯುವಕರನ್ನೂ, ಹಿರಿಯರನ್ನೂ ಆರೋಗ್ಯವನ್ನುಂಟು ಮಾಡುತ್ತೇವೆಂದು ಹೇಳಿ, ಜನರನ್ನು ಸೈತಾನನಿಗೆ ಸಿದ್ಧಗೊಳಿಸಲಿಕ್ಕಾಗುವಂತಹ ಕೇಡುಗಳು ನಮ್ಮ ದೇಶಕ್ಕೆ ಬಾರದಂತೆ ತಡೆಯಾಗುವಂತೆಯೂ, ಅದನ್ನು ತರುವದಕ್ಕಾಗಿ ಏಳುವಂತ ಮೂರು ದುಷ್ಟವ್ಯಕ್ತಿಗಳು ಎದ್ದೇಳಲಿಕ್ಕಾಗದಂತೆ ತಡೆಮಾಡಿ ಪ್ರಾರ್ಥಿಸಿರಿ.